STATEMENT BY THE MINISTER FOR AGRICULTURE AND ANIMAL HUSBANDRY

re Rise the Prices for Fertilisers in the State

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸಿಪುರ).—ನೆನ್ನೆ ಸಭೆಯಲ್ಲಿ ವ್ಯವಸಾಯ ಸಚಿವರು ತಿಳಿಸಿದ ಪ್ರಕಾರ ಕೇಂದ್ರ ಸರ್ಕಾರದ ಜೊತೆ ವ್ಯವಹರಿಸಿದ ದಾಖಲಾತಿಗಳನ್ನು ಸಭೆಯ ಮುಂದೆ ಇಡಬೇಕೂ ಎಂದು ಕೇಳಿಕೊಳ್ಳುತ್ತೇನೆ.

†SRI N. CHIKKE GOWDA (Minister for Agriculture and Animal Husbandry).—I beg to state as follows ;

On 16th August, 1974, when the Calling Attention notices No. 4, 15 & 49 by Shri K. H. Hanume Gowda and others regarding the rise in prices of fertilsers was taken up for discussion and acceptance, certain questions were raised. I had promised to make the position clear to the Hon'ble House.

On 1st of June, 1974, we received telegraphic intimation from the Ministry of Agriculture, Government of India to the effect that the Pool issue of fertilisers for the States and Union territories per metric tonn had been revised with effect from 1st June, 1974. A copy of this telegram is enclosed for the information of the Hon'ble House. A copy of the subsequent telegram recived on 3rd June 1974 is also enclosed.

As the Hon'ble House is aware, the selling prices of fertilisers are fixed by the Government of India under statutory enactment, namely the 'Essential Commodities Act, The Fertiliser Control Order which is issued under this Act is also to be taken into account in this matter. According to Clause 3 of the Fertiliser Control Order, the Government of India fixes the maximum selling prices for certain fertilisers. It will be noticed that the prices fixed by the Government of India, are the maximum selling prices and any dealer, whether wholesale or retail, who sells the fertilisers at prices higher than the maximum selling prices fixed by the Government of India is liable for certain penalties as also prosecution.

Immediately on receipt of intimation from the Government of India of increase in the prices of chemical fertilisers. We suspended the sale of fertilisers for a few days to obtain clarifications on some points from the Government of India Ministry of Agriculture. We had consultations with the authorities concerned in the matter and the position that the increased prices were maximum price was confirmed.

I should clarify to the Hon'ble members of the House that certain quantities of fertilisees had been held in stock both with the Agro-Industries Corporation, the Co-operative Marketing Federation and the Private Dealers before the announcement of the enhanced prices. Any action to restrict the selling prices subsequently would have been

(SRI N. CHIKKE GOWDA)

applicable only to the two State sponsored organisations, namely, Agro-Industries Corporation and the Co-operative Market ng Federation. In the face of the statutory orders issued by the Government of India, it would not have been possible for us to enforce any directive on the private dealers to sell their stocks at prices lower than the prices fixed by the Government of India. If we had asked the Agro-Industries Corporation and the Co-operative marketing Federation to sell the Fertilisers at prices lower than those determined by the Union Government, there would have been many complications and possible mal-practices. For instance, it would have been quite easy for Private Dealers to buy these fertilisers from Agro-Industries Corporation and the Co-operative Marketing Federation at prices lower than the prevailing market rates and in turn, to sell them at higher prices to make profits. This was not considered desirable. Also the State sponsored organisations could make up their previous losses by selling the fertilisers which were with them, at the enhanced rates fixed by the Government of India. Any small profits that they would have earned would naturally be invested by them in other useful ventures w thin the State, Also maintenance of two prices structures, one old price and the other new price, for identical commodities would have led to a good deal of confusion for the farmers, especially because the dealers had obtained their stock not only at the earlier prices but also subsequently, at the enhanced prices. Such a confusion might have resulted in Law and Order problems as well.

In these circumstance and since the State Government do not any statutory authority to take up any other course of action and in the light of the consultations we had with the Goverument of India authorit és, the increased prices were allowed to be continued according to the statutor rders under the Essential Commodities Act.

Some of the Hon'ble Members raised certain points with reference to what is supposed to have happened in other States. I must make it clear that I have not officially known as to what the other S ate Governments. did in this matter. It would appear from Press Reports that some of the State Government made an attempt to sell the old stocks of fertilisers at rates which prevailed befoos 1-6 1974. However we have no confirmation of the exact methods adodted by them and also the success of their attempts.

As the enhanced prices have come into force from 1st June, 1974 and as a large number of sales of fertilisers have taken place it would be extremely difficult to devise a formula according to which the the fertilisers could be sold at price lower than those fixed by the Government of India.

Copy the telegram dated 1st June 1974 received from New Delhi.

NO 1-10/74-FA (G) (.) REVISED POOL ISSUE PRICES OF FERTILISERS FOR STATES AND UNION TERRITORIES PER MT FIXED FROM 1ST JUNE 1974 ( ) UREA (46% N) RS 1920/ (RUPEES ONE THOUSAND NINE HUNDRED AND TWENTY) ( ) UREA 45% N) RS 1880/ (RUPEES ONE THOUSAND EIGHT HUNDRED AND EIGHTY) (.) AMMONIUM SULPHATE 100 KG PACKING RS 870/ (RUPEES EIGHT HUNDRED AND SEVENTY) ( ) AMMONIUM SULPHATE 50 KG PACKING RS 880/ RUPEES EIGHT HUNDRED AND EIGHTY) ( ) IMPORTED CALCIUM AMMONIUM NITRATE (26% N) RS 1085/ (RUPEES ONE ((100)) THOUSAND EIGHTY FIVE) ( ) INDIGENOUS CALCIUM AMMONIUM NITRATE (25% N) RS 1040/ (RUPEES ONE THOUSAND AND FORTY) ( ) AMMONIUM SULPHATE RS 1085/ (RUPEES ONE THOUSAND AND EIGHTY FIVE) (.) AMMONIUM CHLORIDE RS 1040/ (RUPEES ONE THOUSAND AND ((150)) FORTY) (.) DI-AMMONIUM PHOSPHATE 2910/ (RUPEES TWO THOUSAND NINE HUNDRED AND TEN) (.) MONO AMMONIUM PHOSPHATE RS 3040/ (RUPEES THREE THOUSAND AND FORTY) (.) AMMONIUM NITRI PHOSPHATE (20 20-0) RS 1775/ (RUPEES ONE TAOUSAND SEVEN HUNDRED AND SEVENTY FIVE ONLY ( ) AMMONIUM ((200)) PHOSPHATE (20-20 0) RS 1775 (RUPEES ONE THOUSAND SEVEN HUNDRED AND SEVENTY FIVE) ( ) AMMOMIUM NITRO PHOSPHATE (23-23-0) RS 2040/ RUPEES TWO THOUSAND AND FORTY) ( ) AMMONIUM NITRO PHOSPHATE (26-14-0) RS 1740/ (RUPEES ONE THOUSAND SEVEN HUNDRED AND FORTY) (.) MURIATE OF POTASH ((250)) 100 KG PACKING RS 1170/ (RUPEES ONE THOUSAND ONE HUNDRED AND SEVENTY) ( ) MURIATE OF POTASH 50 KG PACKING RS 1180/ RUPEES ONE THOUSAND ONE HUNDRED AND EIGHTY) (.) SULPHATE OF POTASH RS 1495/ (RUPEES ONE THOUSAND FOUR HUNDRED AND NINETY FIVE ONLY) (.) N P K ((300)) 15-15-15 RS 1620/ (RUPEES ONE THOUSAND SIX HUNDRED AND TWENTY) (.) N P K 11-11-11 RS 1190/ (RUPEES ONE THOUSAND ONE HUNDRED AND NINETY) (.) N P K 17-8-9 RS 1260/ (RUPEES ONE THOUSAND TWO HUNDRED AND SIXTY) (.) N P K ((350)) 14-14-14 RS 1515/ (RUPEES ONE THOUSAND FIVE HUNDRED AND FIFTEEN) (.) N P K 14-28-14 RS 2170/ (RUPEES TWO THOUSAND ONE HUNDRED SEVENTY) (.) N P K 12-24-12 RS 1860/ (RUPEES ONE THOUSAND EIGHT HUNDRED AND SIXTY) ( ) N P K 13-13-13 RS ((400)) 1405/ (RUPEES ONE THFUSAND FOUR HUNDRED AND FIVE) (.) N P K 12-32-16 RS 2315/ (RUPEES TWO THOUSAND THREE HUNDRED AND FIFTEEN) (.) N P K 10-26-26 RS 2145/ (RUPEES TWO THOUSAND ONE HUNDRED AND FORTY FIVE) (.) N P K

14-36-12 RS ((450)) 2505/ (RUPEES TWO THOUSAND FIVE HUNDRED AND FIVE) (.) NO CHANGE IN EXISTING DISTRIBUTION MARGINS FOR N P K (11-11-11) AND (17-8-9) WHICH ARE NEW GRADES HAS BEEN FIXED AT RS 70/ (RUPEES SEVENTY) (.) NO REPEAT NO SEPARATE PRICE FOR ((500)) MIXTURES/COMPLEX MANUFACTUREERS () INFORM ALL CONCERNED (.) INTIMATE CLOSING STOCKS OF POOL FERTILISERS AS ON 31 ST MAY 1974 (.) A COMPLETE LIST OF POOL ISSUE PRICES DISTRIBUTION MARGINS AND THE RETAIL PRICES FOLLOWS WITH POST COPY (.) ACKNOWLEDGE RECEIPT (.)

LN LN 202 DA 1048 SECRETARY AGRICULTURE BG NN CTS

COPY TO THE TELEGRAM DATED 3 RD JUNE 1974

SECRETARY AGRICULTURE BANGALORE

X 2355 CA 1945 NEW DELHI 1 STE 105

9-10-26/74 MPR STU () STATUTORY RETAIL PRICES PER TONNE OF FERTILISERS REVISED AS FOLLOWS WITH IMMEDIATE EFEECT UNDER EXTRAORDINARY GOVT. OF INDIA GAZATTE NOTIFICATION DATE THE 1 ST JUNE 1974 (A) AMMONIUM SULPHATE HUNDRED KG PACKING RS 925 (2) AMMONIUM SULPHATE 50 KG PACKING 935 (3) UREA 46% NITROGEN RS 2000 (4) UREA COATED 45% NITROGEN RS 1960 (5) CALCIUM AMMONIUM NITRATE 25% NITROGEN RS 1095 (6) CALCIUM AMMONIUM NITRATE 26% N NITROGEN RS 1145 (.) PLEASE INSTRUCT ALL DEALERS AND DISTRIBUTORS AND WARE HOUSING CORPORATIONS : : : AGRINDIA :

EXTRACT OF SECTION 3 OF FFRTILISFR CONTROL ORDFR, 1957

CONTROL OF PRICES OF FERTILISERS

3. 8(1) The Central Government may, with a view to regulating equitable distribution of fertilisers and making fertilisers available at fair prices by notification in the Official Gazette, fix the maximum price or rates at which any fertiliser may be sold by a manufacturer or a dealer.

(2) The Central Government may, having regard to the local conditions of any area and other relevant circustances, fix different prices are rates in respect of different areas and for different classes of consumers.

(3) No manufacturer or dealer shall sell or offer to sell any fertiliser at a price or rate exceeding the maximum price or rate fixed under this clause.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ. ನೆನ್ನೆ ಮಾಡಿದ ತೀರ್ಮಾನ ಅದು ಅಲ್ಲ.

ಅಧ್ಯಕ್ಷರು.—ಕಾಗದಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.- ಕೇಂದ್ರ ಸರ್ಕಾರದವರು ನೀವು ಸೀಲಿಂಗ್ ಪ್ರೈಸ್‌ಗೆ ಮಾಡಬೇಕು ಎಂದು ಹೇಳಿದ್ದಾರೆಯೇ ಎಂದು ಕ್ಲಾರಿಫಿಕೇಷನ್ ಕೇಳಿದ ಮೇಲೆ ಆ ರೀತಿ ನಿರ್ದೇಶನ ಕೊಟ್ಟಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಕೇಂದ್ರ ಸರ್ಕಾರದವರು ಕೊಟ್ಟ ಆ ಒಂದು ಸಲಹೆಯನ್ನು ಸಭೆಯ ಮುಂದೆ ಇಡಬೇಕು ಎಂದೂ ಹೇಳಿದ್ದೇನೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸಭಾಧ್ಯಕ್ಷರೆಯವರೇ, ಕ್ಲಾರಿಫಿಕೇಷನ್ ಎನ್ನುವುದು ಲಿಖಿತ ಮೂಲಕ ಮಾಡಿಲ್ಲ, ಓರಲ್ ಕನ್‌ಸಲ್‌ಟೇಷನ್ ಮಾಡಿದ್ದೇವೆ. ಲಿಖಿತ ಮೂಲಕ ಕೇಳಿದ್ದೇನೆ ಎಂದು ಹೇಳಲಿಲ್ಲ. ನಾನು ಸಭೆಯ ಮುಂದೆ ಏನೂ ಮುಚ್ಚಿಡುತ್ತಾ ಇಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಲಿಖಿತ ಮೂಲಕ ಕೇಳಿದ್ದೇನೆ ಎಂದು ಹೇಳಲಿಲ್ಲ,

ಶ್ರೀ ಹೆಚ್. ಡಿ. ದೇವೇಗೌಡ.— ಲಿಖಿತ ಮೂಲಕ ಎಂದು ಅವರು ಹೇಳಲಿಲ್ಲ, ಅದನ್ನು ನಾನು ಒಪ್ಪುತ್ತೇನೆ, ಆದರೆ ಕೇಂದ್ರ ಸರ್ಕಾರದವರಿಗೆ ಈ ವಿಷಯದಲ್ಲಿ ವಿವರಣೆ ಕೇಳಿದ ಮೇಲೆ ಸೀಲಿಂಗ್ ಪ್ರೈಸ್‌ಗೆ ಮಾರಬೇಕು ಎಂದು ನಿರ್ದೇಶನ ಮಾಡಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಪೋನಿನಲ್ಲಿ ಮಾತಾಡಿದ್ದೇನೆಂದೂ ಹೇಳಲಿಲ್ಲ ರೆಕಾರ್ಡ್ ಇಡುವ ಬಗ್ಗೆ ಯೋಚನೆ ಮಾಡುತ್ತೇನೆ ಎಂದೂ ಹೇಳಿದರೂ. ಆದರ ಅರ್ಥ ಲಿಖಿತ ಮೂಲಕ ನಿರ್ದೇಶನ ಬಂದಿದೆ ಎಂದು ಯಾರಾದರೂ ತಿಳಿದುಕೊಳ್ಳಬಹುದು. ಅವರು ಹೇಳಿದ್ದು ಸಭೆಯ ಮುಂದೆ ಇಡಲಿಕ್ಕೆ ನನಗೆ ಸಮಯ ಕೊಡಿ. ಅದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ ಎಂದು. ಈ ಸಭೆಯಲ್ಲಿ ಹಾರಿಕೆ ಉತ್ತರ ಕೊಟ್ಟು ಜಾರಿಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದವರು ಏನು ನಿರ್ದೇಶನ ಕೊಟ್ಟಿದ್ದಾರೆ ಅದನ್ನು ಸಭೆಯ ಮುಂದೆ ಇಡಬೇಕು.

ಶ್ರೀ ಎನ್. ಚಿಕ್ಕೇಗೌಡ.—ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಭೆಗೆ ವಾಗ್ದಾನ ಮಾಡಿದ್ದಾರೆ, ನನ್ನಲ್ಲಿ ಇರುವ ಮಾಹಿತಿಯನ್ನು ಒದಗಿಸಬೇಕೋ ಅದನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ್ದೇನೆ ಎನ್ನುವ ಕಾಲದಲ್ಲಿ ಲಿಖಿತ ಮೂಲಕ ಅಥವಾ ಓರಲ್ ಮೂಲಕ ಎನ್ನುವ ವಿಚಾರ ಹೇಳಲಿಲ್ಲ, ಅಷ್ಟೊಂದೂ ವಿಚಾರಗಳನ್ನು ಚ್ಞಾಪಕದಲ್ಲಿ ಇಟ್ಟುಕೊಂಡು ಹೇಳುವುದಕ್ಕೆ ಸಾಧ್ಯವಿಲ್ಲ. ಸಂಬಂಧಪಟ್ಟ ಫೈಲ್ ನೋಡಿ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದೇನೆ. ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ಪರವಾಗಿ ಬಹಿರಂಗಪಡಿಸುವುದು ಉಚಿತವಲ್ಲವೋ. ಈ ವಿಚಾರ ಬಿಟ್ಟರೆ ಇತರ ಯಾವ ವಿಚಾರವನ್ನೂ ಸಭೆಗೆ ಆಗಲಿ, ಜನತೆಗೆ ಆಗಲಿ, ಬಹಿರಂಗಪಡಿಸಕೂಡದು ಎನ್ನುವ

(ಶ್ರೀ ಎನ್. ಚಿಕ್ಕೇಗೌಡ)

ಉದ್ದೇಶ ಇಲ್ಲ. ಸಭೆಯ ಮುಂದೆ ಏನು ಆದೆ ಸ್ಟಾಟ್ಯುಟರಿ ಆರ್ಡರ್ ಪ್ರಕಾರ ಏನು ಬಂದಿದೆ ಅದನ್ನು ನಾವು ಒಂದು ವಾರ ತಡೆಹಿಡಿದು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ವಿಷಯವನ್ನು ಸವಿಸ್ತಾರವಾಗಿ ತಮ್ಮ ಮೂಲಕ ಸಭೆಗೆ ತಿಳಿಸಿದ್ದೇನೆ.

SRI S. BANGARAPPA.—It has come just like a bolt from the blue. ಇವತ್ತು ನಮ್ಮ ಮುಂದೆ ಏನು ಪ್ರಪ್ರಥಮವಾಗಿ ಹೊಸ ನಮೂನೆಯಲ್ಲಿ ವಾದ ಬಂತು, ಅದನ್ನು ನಿನ್ನೆ ಚರ್ಚೆ ಮಾಡತಕ್ಕ ಕಾಲದಲ್ಲಿ ಈ ವಾದ ಮಾಡಿಲ್ಲ. ತಾವು ಹೇಳಿದ್ದು ಕೇಂದ್ರ ಸರ್ಕಾರದ ಜೊತೆ ಪತ್ರ ವ ವಹಾರ ಮಾಡಿದ್ದೇವೆ. ಎಂದು·

ಅಧ್ಯಕ್ಷರು.—ಅವರು ಹೇಳಲಿಲ್ಲ, ಇಲ್ಲದೆ ಇರುವುದನ್ನು ಅವರ ಬಾಯಿಗೆ ಹಾಕಬೇಡಿ.

10-30 A.M.

ಶ್ರೀ ಎಸ್. ಬಂಗಾರಪ್ಪ.—ಬರೀ ಬಾಯಿ ಮಾತಿನಲ್ಲಿ ವ್ಯವಹಾರ ಮಾಡಲಾಗಿದೆ ಎನ್ನುವ ವಾದ ಕೇಳಿ ಬಹಳ ಆಶ್ಚರ್ಯವಾಗಿದೆ. ಸರ್ಕಾರದವರು ಕೇಂದ್ರ ಸರ್ಕಾರದವರ ಜೊತೆಗೆ ಪತ್ರ ವ್ಯವಹಾರ ಮಾಡಿ ಉತ್ತರ ತೆಗೆದುಕೊಂಡಿದ್ದಾರೆ ಎನ್ನುವ ದಾಟಿಯಲ್ಲಿ ನಿನ್ನೆ ಉತ್ತರ ಕೊಟ್ಟಿದ್ದಾರೆ. ಈಗ ರಾಜ್ಯ ಸರ್ಕಾರ ಈ ವಿಷಯವನ್ನು ಬೇಕೆಂದು ಮರೆ ಮಾಚಿ ಮುಚ್ಚಿಹಾಕುವ ಪ್ರಯತ್ನ ಮಾಡುತ್ತಾ ಇರುವುದು ಸ್ಪಷ್ಟವಾಗಿದೆ. ಈ ರೀತಿ ಹೊಸ ವಾದವನ್ನು ಮಂಡನೆ ಮಾಡುವುದು ಸರ್ಕಾರದವರಿಗೆ ಯೋಗ್ಯವಲ್ಲ, ಒಳ್ಳೆಯಹಲ್ಲ ಈ ವಾದವನ್ನು ಮುಂದುವರಿಸುವುದರಿಂದ ಪರಿಸ್ಥಿತಿ ನೆಟ್ಟಗೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ಸಲಹೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ರಾಜ್ಯ ಸರ್ಕಾರ ದವರು ನಾವು ಪತ್ರ ವ್ಯವಹಾರವನ್ನು ಕೇಂದ್ರ ಸರ್ಕಾರದ ಜೊತೆ ಮಾಡಿಲ್ಲ, ಬರೀ ಬಾಯಿ ಮಾತಿನ ವ್ಯವಹಾರ ಮಾಡಿದ್ದೇವೆ ಎನ್ನುವ ಅಭಿಪ್ರಾಯವನ್ನು ಮುಂದುವರಿಸುವುದಾದರೆ, ಬೇರೆ ಪತ್ರಗಳು ಹೇಗೆ ಬಂದವು ಎನ್ನುವ ವಿಚಾರ ಬರುತ್ತದೆ ನಾನು ಒಂದು ಹೊಸ ಸಲಹೆ ಕೊಡುತ್ತೇನೆ. ರಾಜ್ಯ ಸರ್ಕಾರ ದವರು ಇವತ್ತಿನ ದಿವಸ ಹೊಸ ವಾದಕ್ಕೆ ಅಂಟಿಕೊಳ್ಳುವುದಾದರೆ, ನಾವು ಪತ್ರವ್ಯವಹಾರ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಲಿಲ್ಲ ಎನ್ನುವ ವಾದಕ್ಕೆ ಹೇಳುವುದಾದರೆ ಹೊಸ ಸಲಹೆಯನ್ನು ಕೊಡುತ್ತೇನೆ. ಇಡೀ ಸದನದ ಆ ಕಡೆ ಮತ್ತು ಈ ಕಡೆಯವರು ಒಪ್ಪುತ್ತಾರೆಂದ ಭಾವನೆ ಮಾಡುತ್ತೇನೆ. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಸ್ಪಷ್ಟೀಕರಣದ ಬಗ್ಗೆ ಏನು ಕೇಳಿದ್ದಾರೆ, ಮಾನ್ಯ ಸಚಿವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಎಂದು ಮಾನ್ಯ ಅಧ್ಯಕ್ಷರು ಕೇಂದ್ರ ಸರ್ಕಾರಕ್ಕೆ ಬರೆದು ತಿಳಿದು ಈ ಸಭೆಗೆ ಹೇಳಬೇಕು. ಈ ನಿಲುವನ್ನು ಎಲ್ಲರೂ ಒಪ್ಪುತ್ತಾರೆಂದು ತಿಳಿದುಕೊಳ್ಳುತ್ತೇವೆ.

ಅಧ್ಯಕ್ಷರು —ನಾನು ಬರೆಯುವುದಕ್ಕೆ ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆ ನಡೆದಂಥ ಚರ್ಚೆಯಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಸೂಚನೆ ಏನು ಇದೆ ಅದನ್ನು ಸಭೆಯಲ್ಲಿ ಮಂಡಿಸಬೇಕೆ, ಬಿಡಬೇಕೆ ಎಂಬುದನ್ನು ಹೇಳುತ್ತೇನೆ ಅಂತ ಹೇಳಿದರು. ಸೂಚನೆ ಬಂದಿದೆ ಎಂದು ಅರ್ಥವಾಯಿತು. ಸೂಚನೆ ಬಂದಿದೆ ಅಂದರೆ ಲಿಖಿತ ಮೂಲಕ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಅಧ್ಯಕ್ಷರು ಮಾರ್ಗದರ್ಶನ ಮಾಡಬೇಕು. ನಿನ್ನೆ ಮಂತ್ರಿಗಳು ಸಭೆಯಲ್ಲಿ ಹೇಳಿದನ್ನು ಇವತ್ತು, ಬದಲಾವಣೆ ಮಾಡಿ ಕೊಂಡು ಮಾತನಾಡಿದರೆ ನಾವು ಏನು ಹೇಳಬೇಕೋ ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಯಾವ ಸಿಲಿಂಗ್ ಪ್ರೈಸ್‌ಗೆ ಮಾರಬೇಕು ಎಂದು ತಮಗೆ ಆದೇಶ ಕೊಟ್ಟಿದ್ದಾರೆ ಎಂದು ಹೇಳಿದರು. ಆ ಸಂಬಂಧದಲ್ಲಿ ಪತ್ರ ಸಭೆಯ ಮುಂದೆ ಇಡಿ ಎಂದು ಹೇಳಿದೆ, ಇಡಲಿಕ್ಕೆ ಕಾಲ ಬೇಕು ಎಂದು ಹೇಳಿದರು. ಕೇಂದ್ರ ಸರ್ಕಾರದವರು ಸೀಲಿಂಗ್ ಪ್ರೈಸ್ ಯಾವ ರೀತಿ ನಿಗದಿ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. I want to see the earlier page about "ceiling and selling." "The Central Government may, with a view to regu-

lating equitable distribution of fertilisers and making fertilisers available at fair prices by notification in the official gazette, fix the maximum price or rates at which any fertiliser may be sold by a manufacturer or a dealer." ಎಂದು ಹೇಳಿದೆ. I must be sold at selling price. You are trying to evade.

SRI K. H. PATIL.—When they fix a rate that rate must be applied to the all States

SRI H. D. DEVEGOWDA.—You are worsening the case now. ಮಂತ್ರಿಗಳು ಏನು ತಿಳುವಳಿಕೆ ಕೊಡಬೇಕು ಎನ್ನುವ ಬಗ್ಗೆ you must guide us; ತಮ್ಮ ಸಮ್ಮುಖದಲ್ಲಿ ನಡವಳಿಕೆ ನಡೆದಿದೆ. ತಾವು ಏನು ಆದೇಶಕೊಡುತ್ತೀರಾ ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಈಗ ಕೊಡುವ ನಿರ್ಣಯ ಸಭೆಯ ನಡವಳಿಕೆಗೆ ವಿರುದ್ಧವಾಗಿದೆ ಎನ್ನುವ ಭಾವನೆ ಬರಬೇಕಾಗಿಲ್ಲ. ತಾವು ಕೊಡುವ ನಿರ್ಣಯವನ್ನು ದೇಶವೇ ಎದುರು ನೋಡುತ್ತಿದೆ.

ಅಧ್ಯಕ್ಷರು.—ನಿರ್ಣಯ ಕೊಡುವುದಿಲ್ಲ. ನಾನು ಏನು ನಿರ್ಣಯ ಕೊಡಬೇಕಾದರೂ ರೂಲ್ ಪುಸ್ತಕದ ಜೊತೆಟ್ಟಿನೊಳಗೆ ಕೊಡಬೇಕು. ನಿನ್ನೆ ದಿವಸ ಹೇಳಿದ್ದೇನೆ, ಸಾರ್ವಜನಿಕ ಹಿತ ದೃಷ್ಟಿಯ ದೂರತಾಗಿ ಇತರ ಪೇಪರ್ಸ್ ಸಭೆಗೆ ಕೊಡಬೇಕು ಎಂದು. ಅದನ್ನು ವಿನಿಸ್ಟರ್ ಹೇಳುತ್ತಾ ಇದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ತಡೆಹಿಡಿದಿರುವುದನ್ನು ಬಿಟ್ಟು, ಬಾಕಿ ಎಲ್ಲಾ ವಿವರಗಳನ್ನು ಇಲ್ಲಿ ಇಟ್ಟಿದ್ದಾರೆಂದು ಹೇಳುತ್ತಾ ಇದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಪೇಪರ್ಸ್‌ದಲ್ಲಿ, ಪೋನಿನಲ್ಲಿ, ಮಾತನಾಡಿಕೊಂಡ ವಿಷಯ ಹೇಳುತ್ತಿದ್ದಾರೆ. He is advancing second arguments. ತಮ್ಮ ಸಮ್ಮುಖದಲ್ಲಿ ನಡೆದಿರ ತಕ್ಕದ್ದಾ ಸಭೆಯ ನಡವಳಿಕೆ ಇದೆ, ಅದನ್ನು ನೋಡೋಣ. ಹಾಗೆ ಕೇಳಿದರೆ ಕಷ್ಟವಾಗುತ್ತದೆ. ಆ ಸ್ಥಾನದಲ್ಲಿ ಕುರ್ಚಿತು ತಾವು ನಿರ್ಣಯ ಕೊಡುವುದನ್ನು ದೇಶದ ಜನತೆ ನೋಡುತ್ತಾರೆ. ತಾವು ದಾಕ್ಷಿಣ್ಯಕ್ಕೆ ಒಳಗಾಗಬಾರದು.

ಅಧ್ಯಕ್ಷರು.—ನನ್ನನ್ನು ೨೦ ವರ್ಷದಿಂದ ನೋಡಿ ನೋಡಿ ನನಗೆ ದಾಕ್ಷಿಣ್ಯ ಇದೆ ಎಂದು ತಾವು ಹೇಳಿದರೆ ಹೇಗೆ?

ಶ್ರೀ ಎಸ್ ಎಂ. ಕೃಷ್ಣ.—ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಲಿಖಿತ ಮೂಲಕವೇ ವ್ಯವಹಾರ ನಡೆಯಬೇಕಾಗಿಲ್ಲ ಎನ್ನುವುದು ಮಾನ್ಯ ದೇವೇಗೌಡರಿಗೆ ಅವರ ಅಪಾರವಾದ ಮತ್ತು ಅಗಾಧವಾದ ಅನುಭವದಿಂದ ಗೊತ್ತಿರಬೇಕಾದ ವಿಚಾರ. ಮಾನ್ಯ ವ್ಯವಸಾಯ ಸಚಿವರು ಲಿಖಿತ ವ್ಯವಹಾರ ನಡೆದಿದೆ ಎನ್ನುವ ಪದಗಳನ್ನು ಉಪಯೋಗಿಸಿಲ್ಲ ಎಂದು ಅವರು ಹೇಳಿದರು, ವ್ಯವಹಾರಗಳು ನಡೆದಿವೆ, ವಿವರಗಳನ್ನು ಸಭೆಯ ಮುಂದೆ ಇಡಬೇಕೇ ಬೇಡವೇ ಎನ್ನುತಕ್ಕದ್ದು ಸಾರ್ವಜನಿಕ ವಿಚಾರಕ್ಕೆ ಸಂಬಂಧಪಟ್ಟದ್ದು, ಅದನ್ನು ಪರಿಶೀಲನೆ ಮಾಡಿ ಹೇಳುತ್ತೇನೆ ಎಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನಡೆದಿರುತಕ್ಕ ವ್ಯವಹಾರಗಳ ಪರಿಚಯವನ್ನು ಸಭೆಗೆ ಮಾಡಿ ಕೊಟ್ಟಿದ್ದಾರೆ. ಆ ಸನ್ನಿವೇಶಗಳನ್ನು ಹೇಳಿದ್ದಾರೆ. ಎಷ್ಟೋ ಸಾರಿ ಟೆಲೆಕ್ಸ್ ಮೆಸೇಜ್ ಎಕ್ಸ್‌ಚೇಂಜ್ ಮಾಡುತ್ತಾರೆ, ಟೆಲಿಫೋನ್ ಮುಖಾಂತರ ವ್ಯವಹಾರ ಮಾಡುತ್ತಾರೆ, ಕಾಗದದ ಮುಖಾಂತರ ವ್ಯವಹಾರ ಮಾಡುತ್ತಾರೆ, ಟೆಲಿಗ್ರಾಂ ಮುಖಾಂತರ ವ್ಯವಹಾರ ಮಾಡುತ್ತಾರೆ. ಸರ್ಕಾರದ ಮೇಲೆ ನಂಬಿಕೆ ಇಟ್ಟು ಅವರು ಏನು ಹೇಳಿಕೆ ಕೊಟ್ಟಿದ್ದಾರೆ, ಅದು ಪ್ರಮಾಣಿಕವಾದ ಹೇಳಿಕೆ. ಅದು ಬಿಟ್ಟು ಬೇರೆ ಏನು ನಡೆದಿಲ್ಲ ಎಂದು ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡುತ್ತೇನೆ.

ಶ್ರೀ ಬಿ, ಪುಟ್ಟಸ್ವಾಮಯ್ಯ.—ಕೈಕಾಲು, ತಲೆ, ತುಟಿ ಬೆರಳು ಆಡಿಸಿ ವ್ಯವಹಾರ ಮಾಡುವಂಥ ಸರ್ಕಾರ ಇದು ಎಂದು ಒಪ್ಪಿಕೊಳ್ಳುವುದೇ?

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರಿನಲ್ಲಿ ಆದರೆ ನಡೆಯುತ್ತಿತ್ತು ಬೇರೆ ಕಡೆ ಅದು ಆಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಟೆಲಿಫೋನಿನಲ್ಲಿ ಮಾತನಾಡಿ ಕನ್‌ಫರ್ಮ್ ಮಾಡಿಕೊಳ್ಳಬಹುದು. ಬಹುಶಃ ಚಿಕ್ಕೇಗೌಡರು ಮಂತ್ರಿಗಳಾಗಿ ಹೊಸದಾಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ, ಚನ್ನಬಸಪ್ಪನವರಿಗೆ ಮಂತ್ರಿ ಸಿದ್ದವೀರಪ್ಪನವರಿಗೆ ಮಂತ್ರಿ ಕೆಲಸ ಮಾಡಿ ಅನುಭವ ಇದೆ ಟೆಲಿ

(ಶ್ರೀ ಹೆಚ್. ಡಿ. ದೇವೇಗೌಡ)

ಫೋನಿನಲ್ಲಿ ಮಾತನಾಡಿದರೂ as per telephone talk, Government of India has given this direction ಎಂದು ರೆಕಾರ್ಡ್ ಮಾಡಬೇಕು

ಶ್ರೀ ಎನ್. ಚಿಕ್ಕೇಗೌಡ.—ಗೊಬ್ಬರ ಬೆಲೆ ಏರಿಕೆ ಬಗ್ಗೆ ಕೇಂದ್ರದಿಂದ ಏನು ಪತ್ರಗಳು ಬಂದಿವೆ ಎಂದು ಸ್ಪಷ್ಟವಾಗಿ ಸೈಕ್ಲೋಸ್ಟೈಲ್ ಮಾಡಿಕೊಟ್ಟಿದ್ದೇನೆ. ಅದು ಬಿಟ್ಟು ಮತ್ತೆ ಯಾವ ಪತ್ರವ್ಯವಹಾರವು ನಡೆದಿಲ್ಲ. ವಿಷಯ ಮುಚ್ಚಬೇಕು ಎನ್ನತಕ್ಕದ್ದು ಇಲ್ಲ. ನಿನ್ನೆ ದಿವಸ ನಾನು ಹೇಳಿದ ಕಾಲದಲ್ಲಿ ವ್ಯವಹಾರ ನಡೆಸಿದ್ದೇವೆ ಎಂದು ಹೇಳಿದೆ. ಪತ್ರವ್ಯವಹಾರ ನಡೆಸಿದ್ದೇನೆ ಎನ್ನುವುದಾದರೆ ತಿಮ್ಮಪ್ಪನವರು ಕಲ್ಪನಾ ಪ್ರಪಂಚದಲ್ಲಿ ಇದ್ದಾರೆ ಎಂದು ಹೇಳಬೇಕಾಗಿದೆ. ಕೇಂದ್ರ ಸರ್ಕಾರದವರು Essential Commodities Control Order ಪ್ರಕಾರ ಯಾವಾಗ ಗೆಜೆಟ್ ನೋಟಿಫಿಕೇಷನ್ ಮಾಡಿ ಪೈಸ್ ಫಿಕ್ಸ್ ಮಾಡುತ್ತಾರೋ automatically comes into effect. ಹಿಂದೆ ೧೯೬೦ರಲ್ಲಿ ಆ ರೀತಿ ಆಗಿದೆ. ೧೯೬೭ರಲ್ಲಿ ಅದೇ ಪ್ರಕಾರ ಆಗಿದೆ ಓಲ್ಡ್ ಸ್ಟಾಕ್ ಮತ್ತು ನ್ಯೂ ಸ್ಟಾಕ್ ಬಗ್ಗೆ ಏನು ಮಾಡಬೇಕೆಂದು ಕೇಳಿದೆವು ಹೊರತು, ಯಾವ ರೇಟಿನಲ್ಲಿ ಮಾರಬೇಕು, ಹೊಸ ರೇಟಿನಲ್ಲಿ ಮಾರಬೇಕೇ ಎಂದು ಮಾತನಾಡಿಲ್ಲಿ.

Clause 8(1) ರ ಪ್ರಕಾರ It becomes binding on the State Government and operative immediately after it is published in the Gazette, I cannot understand any clarification or suspricion about it. I have clearly stated about it. I have nothing more to say,

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಇನ್ನೊಂದು ಅಶ್ಚರ್ಯಕರವಾದ ಅಂಶವಿದೆ, ನಿನ್ನೆ ದಿವಸ ಬೆಳಿಗ್ಗೆ ಇಲ್ಲಿ ಸರಕಾರದ ಪರವಾಗಿ ಹೇಳುತ್ತಾ, ನಾವು ಟೆಲಿಗ್ರಾಂ ಕಳುಹಿಸಿದೆವು ಮತ್ತು ಟೆಲಿಫೋನಿನ ಮೂಲಕ ಕೇಳಿ ಕೇಂದ್ರ ಸರಕಾರದ ಕ್ಲಾರಿಫಿಕೇಷನ್ ಕೇಳಿದ್ದೇವೆಂದು ಹೇಳಿದರು.

ಶ್ರೀ ಎನ್. ಚಿಕ್ಕೇಗೌಡ.—ನಾನೇ ನಿನ್ನೆ ಹೇಳಿದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಯಾವ ವ್ಯವಹಾರಗಳ ಪೇಪರುಗಳನ್ನು ಸಭೆಯ ಮುಂದೆ ಇಡಬಹುದು ಅಥವಾ ಇಡಬಾರದು ಎನ್ನುವುದನ್ನು ಪರಿಶೀಲನೆ ಮಾಡಿ ಅನಂತರ ಯಾವ ಪೇಪರನ್ನು ಇಲ್ಲಿ ಇಡಬಹುದು ಅದನ್ನು ಸಮಾಲೋಚನೆ ಮಾಡಿ ಸಭೆಯ ಮುಂದೆ ಇಡುತ್ತೇನೆಂದು ಹೇಳಿದ್ದೆ. ಆ ಪ್ರಕಾರ ತಂದು ಇಟ್ಟಿದ್ದೇನೆ. ಇದರ ಬಗ್ಗೆ ಸ್ಪಷ್ಟವಾಗಿ ಎಲ್ಲ ವ್ಯವಹಾರಗಳನ್ನೂ ಹೇಳಿದ್ದೇನೆ. ಇದರೆಲ್ಲಿ ಯಾವುದನ್ನೂ ಮುಚ್ಚಿ ಇಡಬೇಕೆನ್ನುವುದು ನಮ್ಮ ಉದ್ದೇಶವೇನೂ ಇಲ್ಲ. ಆದ್ದರಿಂದ ಇದರ ಮೇಲೆ ಬೇರೆ ಏನಾದರೂ ಹೇಳಿದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಯಾವಾಗ ಈ ಫರ್ಟಿಲೈಜಿರುಗಳ ರೇಟ್ ರೈಸ್ ಆಗುತ್ತದೆ ಆ ರೀತಿ ಆದಾಗಲೆಲ್ಲಾ ಹೀಗೇ ಆಗುತ್ತದೆ. ಹಿಂದೆ ೧೯೬೨ನೇ ಇಸವಿಯಲ್ಲಿ ರೇಟನ್ನು ಹೆಚ್ಚು ಮಾಡಿದಾಗಲೂ ಕೇಂದ್ರ ಸರಕಾರ ತಿಳಿಸಿದ ಮೇಲೆ ನಮ್ಮ ರಾಜ್ಯದಲ್ಲೂ ಅದೇ ದರದಲ್ಲಿ ಮಾರಲಾಗಿತ್ತು. ಇದಕ್ಕನುಗುಣವಾಗಿ ಗೆಜೆಟ್ಟಿನಲ್ಲೂ ಕೂಡ ಇದರ ಬಗ್ಗೆ ತಿಳುವಳಿಕೆ ಕೊಡಲಾಗಿದೆ ಇದರಲ್ಲಿ ಕೆಲವು ಪೇಪರುಗಳ ಮೂಲಕ ವ್ಯವಹಾರ ಮಾಡಲಾಗಿದೆ. ಮತ್ತೆ ಟೆಲಿಗ್ರಾಂ ಕೂಡ ಬಂದಿದೆ. ಇದರಲ್ಲಿನ ಎಲ್ಲ ವ್ಯವಹಾರಗಳನ್ನೂ ಈಗಾಗಲೇ ಮಾನ್ಯ ಸಚಿವರು ತಿಳಿಸಿದ್ದಾರೆ. ಇದರಲ್ಲಿ ಯಾವುದನ್ನೂ ಮುಚ್ಚಿಡಬೇಕಾದಂಥದೇನೂ ಇಲ್ಲ. We have never said it is wrong. ಹಿಂದೆ ಮಾಡಿರುವುದನ್ನೇ ಈಗಲೂ ಮಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಹೇಳಿರುವ ಎಲ್ಲ ಪ್ಯಾರಾಗಳಲ್ಲಿ ಎಂದರೆ ೧,೨,೩, ಹಾಗೂ ನಾಲ್ಕನೇ ಪ್ಯಾರಾಗಳಲ್ಲಿ ಹೇಳಿರುವುದು ಕೇಂದ್ರ ಸರಕಾರದವರಿಂದ ಕ್ಲಾರಿಫಿಕೇಷನ್ ಪಡೆದ ಮೇಲಾನೇ ಮಾಡಿರುವುದು. ಇದು ಲಿಖಿತವೋ ಅಲ್ಲವೋ ಎಂದು ಕೇಳುತ್ತಾರೆ. ಆದರೆ ವ್ಯವಹಾರಗಳನ್ನು ಮಾಡಿ ಅವರಿಂದ ಕ್ಲಾರಿಫಿಕೇಷನ್‌ಗಳನ್ನು ಪಡೆದ ಮೇಲೆ ಮತ್ತು ಅವರಿಂದ ಪರ್ಮಿಷನ್ ಬಂದಮೇಲೆ ಇಲ್ಲಿ ಮಾರಾಟ ಮಾಡಿರುವುದು ?

ಅಧ್ಯಕ್ಷರು.—ಅವರು ಕ್ಲಾರಿಫಿಕೇಷನ್ ಪಡೆದ ಮೇಲೆ ಎಂದು ಹೇಳುತ್ತಿದ್ದಾರೆ. ಇದನ್ನು ಯಾವಾಗ ಮಾಡಿದರು, ಇಲ್ಲವೇ ಲಿಖಿತ ಮೂಲಕವೇ ಎಂದು ಕೇಳಿದರೆ ಹೇಗೆ ? ಅವರು ಎಲ್ಲವನ್ನೂ ನೋಡಿ ಮಾಡಿದ್ದಾರೆಂದು ಅವರ ಹೇಳಿಕೆಯಲ್ಲೇ ವಿವರವಾಗಿ ಹೇಳಿದ್ದಾರಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಮಂತ್ರಿಗಳು ಶ್ರುತಿಪಡಿಸಿರುವ ಹೇಳಿಕೆಯಲ್ಲೇ ಕೆಲವು ವಾಕ್ಯ ಗಳಿವೆ. ಕ್ಲಾರಿಫಿಕೇಷನ್ ಪಡೆದ ಮೇಲೆ ಇದನ್ನು ಮಾಡಲಾಗಿದೆ ಎನ್ನುತ್ತಾರೆ. ಅವರ ಹೇಳಿಕೆಯಲ್ಲಿ : Here it is said : "Immediately on receipt of intimation from the Government of India of the increase in prices of chemical fertilisers, we suspended the sale of fertilisers for a few days to obtain clarifications on some points from the Government of India, Ministry of Agriculture."

ಇದರಲ್ಲಿ ಸೇಲನ್ನು ಸಸ್‌ಪೆಂಡು ಮಾಡಿ ಕೇಂದ್ರದವರಿಂದ ಕ್ಲಾರಿಫಿಕೇಷನ್‌ಗಳನ್ನು ಪಡೆದ ನಂತರ ಇದನ್ನು ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ನಾವು ಕೇಳುತ್ತಿರುವುದು ಅವರಿಂದ ಬಂದಿರುವ ಕ್ಲಾರಿಫಿಕೇಷನ್ ಗಳ ವಿವರಗಳೇನು ? ಅದು ಇಲ್ಲಿ ಹೇಳಲಿಲ್ಲ. ಅದನ್ನೇ ನಾವು ಕೇಳುತ್ತಿರುವುದು. ಇದರಲ್ಲಿ ಪೂರ್ವ ಭಾವಿಯಾಗಿ ಕೇಂದ್ರ ಸರಕಾರದ ಆದೇಶ ಎನಿತ್ತು ಎಂದರೆ ಗರಿಷ್ಠ ಮಿತಿ ಏನು ಎಂದು ನಿಗದಿ ಮಾಡಿದ್ದರೇ ವಿನಾ ಕನಿಷ್ಠ ದರವನ್ನು ಅವರೇನೂ ಹೇಳಿರಲಿಲ್ಲ. ಅವರೇ ಇಲ್ಲಿ ಹೇಳಿರುವುದೇನು ಎಂದರೆ ಕ್ಲಾಸು ೩ ಸಬ ಕ್ಲಾಸು ೩ರ ಪ್ರಕಾರ :

> "No manufacturer or dealer shall sell or offer to sell any fertiliser at a price or rate exceeding the maximum price of rate fixed under this Clause."

ಇದರಲ್ಲಿ ಮ್ಯಾಕ್ಸಿಮಂ ವಿಚಾರ ಹೇಳಿದ್ದಾರೆಯೇ ವಿನಾ ಮಿನಿಮಂ ಪ್ರೈಸಸ್ ಬಗ್ಗೆ ಏನನ್ನೂ ಹೇಳಲಿಲ್ಲ. ಕೇಂದ್ರ ಸರಕಾರದವರು ಇಂತಹ ದರದಲ್ಲಿ ಮಾರಾಟ ಮಾಡಬಹುದು ಎಂದು ಏನು ಕ್ಲಾರಿಫಿಕೇಷನ್ ಕೊಟ್ಟರು ಅದರ ಬಗ್ಗೆ ಇಲ್ಲಿ ಏನನ್ನೂ ಹೇಳಲಿಲ್ಲ. ಮಾಕ್ಸಿಮಂ ಪ್ರೈಸ್ ಬಗ್ಗೆ ಮಾತ್ರ ಹೇಳಲಾಗಿವೆ. ಮಿನಿಮಂ ಪ್ರೈಸಸ್ ಬಗ್ಗೆ ಹೇಳಲಿಲ್ಲ. ಕೇಂದ್ರ ಸರಕಾರದೊಡನೆ ಯಾವ ರೀತಿ ಸಮಜಾಯಿಷಿ ಕೊಟ್ಟು ವ್ಯವಹಾರ ಮಾಡಿದ್ದಾರೆ ಅದನ್ನು ತಿಳಿಯಬೇಕಾಗಿದೆ. ಇದು ಬರೀ ಲಕ್ಷಗಟ್ಟಲೆಯು ವ್ಯವಹಾರವಲ್ಲ. ಕೋಟಿಗಟ್ಟಲೆ ಹಣದ ದುರುಪಯೋಗದ ವ್ಯವಹಾರಗಳು ಇದರಲ್ಲಿವೆ. ಇದೆಲ್ಲಾ ತನಿಖೆ ಮಾಡಿದಾಗ ಹೊರಗೆ ಬರುತ್ತವೆ. ಇಂತಹ ಅವ್ಯವಹಾರಗಳಿಗೆ ಸಂಬಂಧಪಟ್ಟ ಹಾಗೆ ಇದರ ವಿವರಗಳಂ ನಮಗೆ ಬೇಕಾಗಿವೆ. ಆ ಕ್ಲಾರಿಫಿಕೇಷನ್ ಯಾವುದಂ ಎನ್ನುವುದು ನಮಗೆ ಬೇಕಾಗಿರುವುದು : What is that Clarification ?

Sri D. DEVARAJ URS.—'Act according to the telegram' ಎನ್ನುವುದೇ ಕ್ಲಾರಿಫಿಕೇಷನ್.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಸೊಸೈಟಿಗಳವರಂ ಅವರಲ್ಲಿದ್ದ ಸ್ಟಾಕನ್ನು ಮಾರುವಾಗ ಹಳೇಯ ಬೆಲೆಯಲ್ಲೇ ಬಿಲ್ಲನ್ನು ಹಾಕಿ ಮಾರಾಟ ಮಾಡಿದ್ದಾರೆ. ಇದರ ಬಗ್ಗೆ ಪೂರ್ಣ ತನಿಖೆ ನಡೆಸಿದರೆ ಇದರಲ್ಲಿರುವ ಎಲ್ಲ ಅವ್ಯವಹಾರಗಳೂ ಬೆಳಕಿಗೆ ಬರುತ್ತವೆ.

ಶ್ರೀ ಎಸ್. ಚಿಕ್ಕೇಗೌಡ.—೩೦-೬-೧೯೭೪ರಲ್ಲಿ ಸರಕಾರ ಒಂದಂ ಸರ್‌ಕ್ಯೂಲರು ಕಳುಹಿಸಿ ಅದರಂತೆ ಪ್ರೈವೇಟು ಡೀಲರುಗಳಲ್ಲಿ ಎಷ್ಟು ಸ್ಟಾಕು ಇತ್ತು ಮತ್ತು ಸೊಸೈಟಿಗಳಲ್ಲಿ ಎಷ್ಟು ಸ್ಟಾಕು ಇತ್ತು ಎಂಬುದನ್ನು ಸರಿಯಾಗಿ ವೆರಿಫೈ ಮಾಡಲು ನಮ್ಮ ಅಧಿಕಾರಿಗಳನ್ನು ಕಳುಹಿಸಿ ತರಿಸಿಟ್ಟಿದ್ದೇವೆ ಮತ್ತು ಎಲ್ಲ ಡೀಲರುಗಳೀಂದಲೂ ಡಿಕ್ಲರೇಷನ್ ಪಡೆದಿದ್ದೇವೆ. ಸಾರ್ವಜನಿಕ ಹಿತದೃಷ್ಟಿಯಿಂದ ಇವರ ಎಲ್ಲ ಮಾಹಿತಿ ಗಳು ಇಲ್ಲಿ ಹೇಳಲಾಗಲಿಲ್ಲ. ಎಲ್ಲವನ್ನೂ ಕೇಂದ್ರ ಸರಕಾರದ ನೀತಿನಿಯಮಗಳಿಗನುಗುಣವಾಗಿ ನಾವುಗಳು ಮಾಡಿದ್ದೇವೆ. ಇದಕ್ಕಿಂತ ಹೆಚ್ಚಾಗಿ ಇಲ್ಲಿ ಏನನ್ನೂ ಹೇಳಬಯಸುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕ್ಲಾರಿಫಿಕೇಷನ್ ಕೇಂದ್ರದಿಂದ ಬಂದಿರುವ ವಿಚಾರ ಇದರಲ್ಲಿಲ್ಲ. ಕೇಂದ್ರ ಸರಕಾರದ ಆರ್ಡರಾದರೂ ಯಾವುದು ? ಅದು ನಮಗೆ ಬೇಕಾಗಿರುವುದು. It is available on the record ? There is no necessity on the part of the Government to harp on this small issue. What is the clarification ? Here it is stated : 'We got clarification' ಎಂದಿದೆ. ಯಾವ ಪಾಯಿಂಟಿನ ಮೇಲೆ ಕ್ಲಾರಿಫಿಕೇಷನ್ ಕೇಳಿದ್ದರು ? ಇದು ಇಲ್ಲಿರುವ ಪ್ರಶ್ನೆ. ಇದಕ್ಕಾಗಿ ಇತಿಹಾಸ ಪರಿವರ್ತನೆ ಮಾಡಬೇಕಾದ್ದಿಲ್ಲ ಇದರಲ್ಲಿ ಬಂದ ಕ್ಲಾರಿಫಿಕೇಷನ್ ಆದರೂ ಏನು ಎನ್ನುವುದನ್ನು ಇಲ್ಲಿ ತಿಳಿಸಬೇಕು ಮತ್ತು ಇದನ್ನು ಸಭೆಯ ಮುಂದೆ ಇಡಬೇಕು ಎಂದು ನಾವು ಕೇಳುತ್ತಿರುವುದು.

ಶ್ರೀ ಸಿ. ಬೈರೇಗೌಡ.—ಕ್ಲಾರಿಫಿಕೇಷನ್‌ಗಳು ಬರುವವರಿಗೂ ಸೇಲನ್ನು ಸಸ್‌ಪೆಂಡು ಮಾಡ ಬೇಕೆಂದು ಇಲ್ಲಿನ ಸೊಸೈಟಿಗಳಿಗೆ ಹಾಗೂ ಮಾರಾಟಗಾರರಿಗೆ ತಿಳಿಸಿರಲಿಲ್ಲವೇ ? ಕೇಂದ್ರ ಸರಕಾರದ ಒತ್ತಾಯದ ಮೇಲೆ ಅಲ್ಲವೇ ರಾಜ್ಯ ಸರಕಾರದವರು ಇಂತಹ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ಸೂಚನೆಗಳು ಕೊಟ್ಟಿರುವುದು ಇದಕ್ಕಾಗಿ ರಾಜ್ಯ ಸರಕಾರಕ್ಕೂ ಕೇಂದ್ರ ಸರಕಾರಕ್ಕೂ ನಡೆದ ಪತ್ರ ವ್ಯವಹಾರಗಳು ಸಭೆಯ ಮುಂದೆ ಬಂದರೆ ಇದರ ಎಲ್ಲ ವ್ಯವಹಾರಗಳೂ ಚೆನ್ನಾಗಿ ಗೊತ್ತಾಗುತ್ತದೆ. ಇದರಿಂದ ನನಗೆ ಬಂದಿರುವ ಅನುಮಾನಗಳೂ ಪರಿಹಾರವಾಗುತ್ತವೆ.

ಶ್ರೀ ಡಿ. ದೇವರಾಜ ಅರಸ್.—ತಮ್ಮ ಅವಗಾಹನೆಗಾಗಿ ಇಲ್ಲಿ ಕೊಟ್ಟಿರುವ ಹೇಳಿಕೆಯ ಒಂದು ಪ್ಯಾರಾವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇದರಲ್ಲೇನಿದೆ ಎಂದರೆ :

I will read the relevant para again.—

"Immediately on receipt of intimation from the Government of India of the increase in prices of Chemical Fertilisers, we suspended the sale of fertiliser for a few days to obtain clarifications on same points from the Government of India, Ministry of Agriculture.—we had consultations with the authorities concerned in the matter and the position that the increased prices were the maximum prices was confirmed."

ಏನು ಸಡಿಲಿಕೆ ಇರಬಹುದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದ್ದೇವೆ. ಇಲ್ಲದ್ದನ್ನು ಕೊಡಿ ಎಂದರೆ ಏನು ಮಾಡೋಣ ? It was confirmed by them.

ಶ್ರೀ ಕಾಗೋಡು ತಿಮ್ಮಪ್ಪ —ಕೇಂದ್ರ ಸರ್ಕಾರದಿಂದ ಟೆಲಿಗ್ರಾಂ ಬಂದ ಮೇಲೆ ರಿಟನ್ ಕ್ಲಾರಿಫಿಕೇಷನ್ ಯಾವುದೂ ಬಂದಿಲ್ಲವೆಂದು ಹೇಳುತ್ತಾರೆಯೇ ?

SRI D. DEVARAJURS.—ಬಂದಿಲ್ಲ. I have categorically stated that we got it confirmed and we have acted accordingly.

ಶ್ರೀ ಎಚ್. ಡಿ ದೇವೇಗೌಡ.—ನಿನ್ನೆ ಸಭೆಯಲ್ಲಿ ಮಾನ್ಯ ಹುಯಿಲ್ಕುಮಂತ್ರಿಗಳು ಇದ್ದಿಲ್ಲ. ಬೇರೆ ರಾಜ್ಯಗಳಲ್ಲಿ ಇಳೇ ಸ್ಥಾನವನ್ನು ಹೇಳಿ ದರದಲ್ಲಿ ಮಾರಾಟ ಮಾಡಿರುವಾಗ ಕರ್ನಾಟಕದಲ್ಲಿ ಆ ರೀತಿ ಏಕೆ ಮಾಡಲಿಲ್ಲವೆಂದು ಕೇಳಿದ್ದಕ್ಕೆ ಮಂತ್ರಿಗಳು ಕೇಂದ್ರ ಸರ್ಕಾರದಿಂದ ಕ್ಲಾರಿಫಿಕೇಷನ್ ತರಿಸಿಕೊಂಡು ಇಂಡಿಯಾ ಸರ್ಕಾರದವರ ಸೂಚನೆ ಮೇಲೆ ಮಾರಿದ್ದೇವೆಂದು ಹೇಳಿದರು. ಆ ಹಂತದಲ್ಲಿ ನಮ್ಮ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ನಡೆದಿರುವ ಪತ್ರ ವ್ಯವಹಾರವನ್ನು ಸಭೆಯ ಮುಂದೆ ಇಡಿ ಎಂದೂ ಹೇಳಿದೆವು. ಸಭೆಯ ಮುಂದೆ ಇಡಬೇಕೇ ಬೇಡವೇ ಎನ್ನುವುದಕ್ಕೆ ಸಮಯ ಬೇಕು ಎಂದು ಹೇಳಿದರು. ಆದರೆ ಈ ಸರ್ಕಾರದವರು ನಮ್ಮ ಮುಂದೆ ಇಟ್ಟಿರುವುದೂ It is a note prepared by the Government.

SRI D. DEVARAJ URS (Chief Minister).—It is prepared based on what has happened.

SRI H. D. DEVE GOWDA.—It is not at all the correspondence that had taken place between the State Government and the Central Government.

SRI D. DEVARAJURS.—There is no correspondence other than this.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ನಡೆದಿರತಕ್ಕ ವ್ಯವಹಾರ ಫೋಸ್ಟ್‌ನಲ್ಲಿ ನಡೆದ ವ್ಯವಹಾರದ ಕನ್‌ಫರ್ಮೇಷನ್ ಇವನ್ನು ಸಭೆಯ ಮುಂದೆ ಇಡಬೇಕೆಂದು ಕೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ನಾವು ಕಾಲಾವಕಾಶ ತೆಗೆದುಕೊಂಡದ್ದು ವೆರಿಫೈ ಮಾಡುವುದಕ್ಕೆ. ವೆರಿಫೈ ಮಾಡಿದೆವು. ಇದು ಬಿಟ್ಟು ಇನ್ನೇನೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮುಂಖ್ಯ ಮಂತ್ರಿಗಳು ಈಗ ಈ ಮಾತನ್ನು ಹೇಳಿದರೆ ಕಷ್ಟವಾಗುತ್ತದೆ. ನಿನ್ನೆ ಈ ವಿಚಾರದಲ್ಲಿ ಒಂದು, ಒಂದೂವರೆ ಗಂಟೆ ಚರ್ಚೆಯಾಗಿದೆ. ಅವರು ಈಗ ಹೀಗೆ ಹೇಳಿದರೆ ಅದರ ಬಗ್ಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

SRI D. DEVARAJ URS.—When I have categorically stated that there is no paper which we have kept back and clarified the whole position, there is no need to discuss further. ಪುನಃ ಪುನಃ ಅದನ್ನೇ ಹೇಳುತ್ತಿದ್ದರೆ ಏನು ಹೇಳುವುದು ? ಇಲ್ಲದೆ ಇರುವುದನ್ನು ಸೃಷ್ಟಿ ಮಾಡಿ ತಂದಿಡೋಣವೇ ?

ಶ್ರೀ ಎಚ್. ಡಿ. ದೇವೇಗೌಡ.—ಸೃಷ್ಟಿ ಮಾಡಿಕೊಂಡು ಹೇಳುವಾಗ ಹಾಗೆಯೇ ಮಾಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಅವರು ಇಷ್ಟ ಬಂದ ಹಾಗಿ ಹೇಳಿಕೊಳ್ಳಬಹುದು. ಅವರು ಏನು ಅಭಿಪ್ರಾಯ ಬೇಕಾದರೂ ಇಟ್ಟುಕೊಳ್ಳಬಹುದು, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಕನ್‌ಫರ್ಮ್ ಮಾಡಿಸಿಕೊಂಡಿದ್ದೇವೆ, ಕ್ಲಾರಿಫಿಕೇಷನ್ ತೆಗೆದುಕೊಂಡಿದ್ದೇವೆ. ಅದರಂತೆ ನಡೆದಿದ್ದೇವೆ. ಬೇರೆ ಯಾವುದಾದರೂ ಪತ್ರವಿದೆಯೇ ಎಂದರೆ ಯಾವುದೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ —ನಿನ್ನೆಯೇ ಈ ಮಾತನ್ನು ಹೇಳಬೇಕಾಗಿತ್ತು.

ಶ್ರೀ ಡಿ. ದೇವರಾಜ ಅರಸ್.—ನಿನ್ನೆ ನೋಡದೆ ಹೇಳುವುದಕ್ಕಾಗುತ್ತಿರಲಿಲ್ಲ. ಅದಕ್ಕೆ ನಾಳೆ ನೋಡಿ ಹೇಳುತ್ತೇವೆಂದರು ಆಷ್ಟೆ.

ಶ್ರೀ ಎಚ್. ಡಿ. ದೇವೇಗೌಡ.—ಬಹುಶಃ ಹೀಗಾದರೆ ನಾವು ಈ ಸಭೆಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಸರ್ಕಾರ ಯಾವುದಾದರೂ ದಾಖಲಾತಿಯನ್ನು ಸಭೆಯ ಮುಂದೆ ಇಡಬೇಕು ಎಂದರೆ ಪಬ್ಲಿಕ್ ಇಂಟರೆಸ್ಟ್‌ನಿಂದ ಇಡಬೇಕೋ ಬೇಡವೋ ಎನ್ನುವುದಕ್ಕೆ ೨೪ ಗಂಟೆ ಕಾಲಾವಕಾಶ ಕೇಳಿ now they are coming forward with a new argument. I cannot understand the logic behind it. Where was the need to come forward with the new argument ? ನಿನ್ನೆಯೇ ಫೋನ್‌ನಲ್ಲಿ ಹೀಗೆನಾಡಿ ಕನ್‌ಫರ್ಮ್ ಮಾಡಿಕೊಳ್ಳಲಾಗಿದೆ ಎಂದು ಹೇಳಬಹುದಾಗಿತ್ತು.

SRI D. DEVARAJ URS.—There is nothing extraordinary because the hon. Minister abruptly cannot say ; From the records, we found that there is nothing more except this phone confirmation and the telegram that has been placed before this House. ಬೇರೆ ಏನಾದರೂ ಇದ್ದಿದ್ದರೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ಏನೂ ತೊಂದರೆ ಇಲ್ಲ. ಬರವಣಿಗೆಯಲ್ಲಿಲ್ಲದೆ ಇರುವುದನ್ನು ಕೊಡಬೇಕೆಂದರೆ ಎಲ್ಲಿಂದ ತಂದು ಕೊಡೋಣ ?

SRI S. BANGARAPPA.—Yesterday the hon. Minister has stated that there are documents or correspondence. Whether to place them before the House or not in the public interest would be considered was the stand taken by the Government.

ಅಧ್ಯಕ್ಷರು.—ಸುಮ್ಮನೆ ಕಾಲಹರಣ ಮಾಡುವುದರಲ್ಲಿ ಪ್ರಯೋಜನವಿಲ್ಲ. ನಿನ್ನೆಯ ದಿನಕ್ಕೆ.....

ಶ್ರೀ ಎಚ್. ಡಿ. ದೇವೇಗೌಡ —ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಒಂದೂ ಮಾತು: ಮಾನ್ಯ ಮುಂಖ್ಯ ಮಂತ್ರಿಗಳು ಹೊಸ ಅಗ್ರ್ಯುಮೆಂಟ್ ಮುಂಡಿಸುತ್ತಿದ್ದಾರೆ. ಪತ್ರಿಕಾ ವರದಿಗಳ ಪ್ರಕಾರ ಮಧ್ಯ ಪ್ರದೇಶ ಮತ್ತು ಕೆಲವು ರಾಜ್ಯಗಳು ಹಳೇ ದರದಲ್ಲಿ ಮಾರಾಟ ಮಾಡಿವೆ ಎಂದು ಗೊತ್ತಾಗಿದೆ. ನಾವು ಇಂಕೆ ಈ ವಿಚಾರದಲ್ಲಿ ಇಷ್ಟೊಂದು ಒತ್ತಡವನ್ನು ಹಾಕುತ್ತಿದ್ದೇವೆಂದರೆ ಕೇಂದ್ರ ಸರ್ಕಾರದವರು ಬೇರೆ

(ಶ್ರೀ ಹೆಚ್. ಡಿ. ದೇವೇಗೌಡ)

ರಾಜ್ಯಗಳಲ್ಲಿ ಹಳೆಯ ಸ್ಟಾಕನ್ನು ಹಳೆಯ ದರದಲ್ಲಿ ಮಾರಾಟ ಮಾಡಲು ಆನುವು ಮಾಡಿಕೊಟ್ಟಿರುವಾಗ ಅದೇ ಒಂದು ಸೌಲಭ್ಯವನ್ನು ಕರ್ನಾಟಕ ರಾಜ್ಯಕ್ಕೆ ಏಕೆ ಕೊಡುವುದಕ್ಕೆ ಆಗುತ್ತಿಲ್ಲ ?

Why the Central Government have given a confirmation to sell the fertilizers in the Karnataka at the new rates ? That is the main point here.

ಶ್ರೀ ಡಿ. ದೇವರಾಜ ಅರಸ್ —ಇನ್ನೊಂದು ಸರ್ಕಾರದವರು ಅವರಲ್ಲಿದ್ದ ಸ್ಟಾಕನ್ನು ಹಳೆಯ ದರಕ್ಕೆ ಏಕೆ ಮಾರಾಟ ಮಾಡಿದರು ಎಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಸರ್ಕಾರದಿಂದ ನಾವು ಏನು ಮಾಡಿದ್ದೇವೆನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮೂರನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ, ನಿಗದಿ ಮಾಡಿರುವುದಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡಿದರೆ ಫೆನಾಲ್ಟಿ ಇಂಪೋಸ್ ಮಾಡಬೇಕು ಎಂದು ಹೇಳಿದಾರೆ. ಕಡಿಮೆ ದರವಿದ್ದರೆ, ಹಳೆಯ ಸ್ಟಾಕನ್ನು ಹಳೆಯ ದರದಲ್ಲಿ ಮಾರಾಟ ಮಾಡಿದರೆ ತೊಂದರೆ ಏನಿತ್ತು ?

SRI D. DEVARAJ URS.—Legally, as long as we are within the legal bounds and limits, what we have done, we have correctly done and that is all ಯಾವ ದರಕ್ಕೆ ಮಾರಬೇಕೆನ್ನುವ ವಿಚಾರದಲ್ಲಿ ಅನುಮಾನ ಬಂದು ಕೇಂದ್ರ ಸರ್ಕಾರದಿಂದ ಕ್ಲಾರಿಫಿಕೇಷನ್ ಪಡೆದುಕೊಂಡು ಮಾರಾಟ ಮಾಡಿದ್ದೇವೆ ನಾವು ಕಡಿಮೆ ಬೆಲೆಗೆ ಮಾರಿದ್ದರೂ ಅದನ್ನು ಬೇರೆಯವರು ಹೆಚ್ಚಿನ ಬೆಲೆಗೆ ಮಾರುವುದಕ್ಕೆ ಆಭ್ಯಂತರವಿಲ್ಲ, ದುರುಪಯೋಗ ಮಾಡಿದವರಿಗೆ ಅಭ್ಯಂತರವಿಲ್ಲ.

ಶ್ರೀ ಸಿ. ಬೈರೇಗೌಡ.—ರೈತರೂ ಯಾರೂ ಹೆಚ್ಚಿನ ಬೆಲೆಗೆ ಮಾರಾಟ ಮಾಡಿಕೊಳ್ಳುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ರೈತರೂ ಅನೇಕ ಸಂದರ್ಭದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಿ ಮಾರಿರುವುದನ್ನು ಕಂಡು ಹಿಡಿಯಲಾಗಿದೆ. ಬೇರೆಯವರು ದುರುಪಯೋಗ ಮಾಡುವುದರ ಬದಲು ಲೀಗಲ್ ಆಗಿ ಎಷ್ಟು ಬೆಲೆಗೆ ಮಾರಾಟ ಮಾಡಬೇಕೆಂದಿತ್ತೋ ಅಷ್ಟಕ್ಕೆ ಮಾರಿದ್ದೇವೆ. In our discretion we have done it. If some other Government has not sought for clarification, what can I say ? In their discretion, they might have felt it to be alright. Are we illegal in our action is the question ? We are perfectly within our bounds.

SRI H. D. DEVE GOWDA.—I have never said that the Gaverenment has acted illegally. ಏಕೆ ದ್ವಿಮುಖ ನೀತಿಯನ್ನು ಅನುಸರಿಸಲಾಗುತ್ತಿದೆ ? ಬೇರೆ ರಾಜ್ಯದಲ್ಲಿ ಹಳೇ ದರದಲ್ಲಿ ಮಾರಬೇಕೆಂದೂ ನಮ್ಮ ರಾಜ್ಯದಲ್ಲಿ ಹೊಸ ದರದಲ್ಲಿ ಮಾರಾಟ ಮಾಡಬೇಕೆಂದು ಹೇಳಿದರೆ ಹೇಗೆ ? ಯಾವ ಕಾರಣದಿಂದ ಹೀಗಾಗಿದೆ ? ನಿಜಾಂಶವನ್ನು ತಿಳಿಸಿ. You come out and spell out.

SRI D. DEVARAJ URS.—Why should we spell out ? ಇನ್ನೊಬ್ಬರಿಗೆ ಏನು ಹೇಳಿದ್ದಾರೆಂಬುದು ನನಗೇನು ಗೊತ್ತು ? ನನಗೆ ಗೊತ್ತಿರುವುದನ್ನು, ನಮ್ಮ ಸರ್ಕಾರಕ್ಕೆ ಗೊತ್ತಿರುವುದನ್ನು ಹೇಳಿದ್ದೇನೆ.

(ನಾಲ್ಕಾರು ಸದಸ್ಯರು ಒಟ್ಟಿಗೆ ನಿಂತುಕೊಂಡರು)

ಅಧ್ಯಕ್ಷರು.— ಈ ವಿಷಯದ ಮೇಲೆ ಈಗಾಗಲೇ ೪೫-೫೦ ನಿಮಿಷ ಕಳೆದಿದ್ದೇವೆ. ಸರ್ಕಾರದವರು ಇರುವ ವಿಚಾರವನ್ನು ತಿಳಿಸಿದ್ದಾರೆ.

ಅಧ್ಯಕ್ಷರು.—ಇದರ ಬಗ್ಗೆ ರೂಲಿಂಗ್ ಕೊಡಬೇಕಾಗಿಲ್ಲ.

11-00 A.M.

ಶ್ರೀ ಎಚ್. ಡಿ. ದೇವೇಗೌಡ.—ನಾವು ಈ ಸಭೆಯಲ್ಲಿ ಅನಾವಶ್ಯಕವಾಗಿ ಕಾಲ ಕಳೆಯುವುದಕ್ಕೆ ಬಂದಿಲ್ಲ, ನಾವು ಇದರ ಬಗ್ಗೆ ಪ್ರತಿಭಟನೆ ಮಾಡಬೇಕಾಗುತ್ತದೆ. The stand taken by the Government is really uncharitable. ಮಂತ್ರಿಗಳು ನಿನ್ನೆ ಹೇಳಿದಂಥ ಮಾತನ್ನು ಬದಲಾವಣೆ ಮಾಡಿಕೊಂಡು ಇವತ್ತು ಮನಸ್ಸಿಗೆ ಬಂದಂತೆ ಉತ್ತರ ಕೊಡುತ್ತಿದ್ದಾರೆ.

SRI N. CHIKKE GOWDA.—I strongly refute the charges.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ಇದರ ಬಗ್ಗೆ ನಾನು ರೂಲಿಂಗ್ ಕೊಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು ರೂಲಿಂಗ್ ಕೊಡಬೇಕಾಗುತ್ತದೆ. ನಿನ್ನೆ ಮಂತ್ರಿಗಳು ಹೇಳಿರತಕ್ಕಂಥಾ ; ನಡೆದಿರತಕ್ಕಂಥ ವ್ಯವಹಾರಗಳನ್ನು ಈ ಸಭೆಯ ಮುಂದೆ ಇಡಬೇಕಾದರೆ ಸೆಕ್ರೆಟರಿಯವರನ್ನು ಕನ್‌ಸಲ್ಟ್ ಮಾಡಬೇಕು ಎಂದು ಹೇಳುವಷ್ಟರಮಟ್ಟಿಗೆ ಹೋಯಿತು. ದಯಮಾಡಿ ಆ ಒಂದು stand ಗೆ ಹಿಂದೆ ಹೋಗುವುದಾದರೆ ತಾವು ರೂಲಿಂಗ್ ಕೊಡಬೇಕಾಗುತ್ತದೆ He is advancing a second argument. I cannot understand it. ಮಂತ್ರಿಗಳು ನಿನ್ನೆ ಏನು ಹೇಳಿದರು ಅದರಂತೆ ನಡೆದುಕೊಂಡಿದ್ದಾರೆಯೇ ? ಇವತ್ತು ಒಂದು ಹೊಸ ವಾದವನ್ನು ಸಭೆಯ ಮುಂದೆ ಇಟ್ಟು ನಿನ್ನೆ ಏನು ಹೇಳಿದರು, ಅದರಿಂದ ನುಣುಚಿಕೊಳ್ಳುತ್ತಿರುವುದರಿಂದ ತಾವು ದಯಮಾಡಿ ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ರೂಲಿಂಗ್ ಕೊಡಬೇಕಾದ ಅಗತ್ಯವೇನಿದೆ ? ಮಂತ್ರಿಗಳು ಸೆಕ್ರೆಟರಿಯವರನ್ನು ಕಲ್‌ಸಲ್ಟ್ ಮಾಡಿರುವುದು ನಿಜ ಎನ್ನುವುದು ಒಪ್ಪಿಕೊಂಡಿದ್ದಾರೆ. ಮಂತ್ರಿಗಳು ಲಿಖಿತ ಮೂಲಕ ನಿನ್ನೆಯೂ ಹೇಳಲಿಲ್ಲ, ಇವತ್ತೂ ಹೇಳಲಿಲ್ಲ. ಏನೇನು ಪೇಪರ್ಸ್ ಇದೆಯೋ ಅದನ್ನೆಲ್ಲಾ ಸಭೆಯು ಮುಂದೆ ಇಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸಾರ್ವಜನಿಕ ಹಿತದೃಷ್ಟಿಯಿಂದ ಡಾಕ್ಯುಮೆಂಟ್ ಪ್ಲೇಸ್ ಮಾಡುವ ಪ್ರಶ್ನೆ ಬಂದಾಗ, I sincerely feel that it requires a ruling from the Chair.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳಿದ್ದು ಏನೆಂದರೆ, ಈ ವಿಷಯದ ಮೇಲೆ ಯಾವುಯಾವುದೋ ಎನ್ನುವುದು ಸಾಮಾನ್ಯವಾಗಿ ರೂಲ್ಸ್ ಆಫ್ ಬಿಸಿನೆಸ್ ಪ್ರಕಾರ ಸೆಕ್ರೆಟರಿಯವರನ್ನು ಕನ್‌ಸಲ್ಟ್ ಮಾಡಬೇಕಾಗಿತ್ತು. ಅದರ ಪ್ರಕಾರ ಕನ್ಸಲ್ಟ್ ಮಾಡಿ, ಡಾಕ್ಯುಮೆಂಟನ್ನು ಸಭೆಯ ಮುಂದೆ ಇಟ್ಟದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಏನು ಇಟ್ಟಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಡಾಕ್ಯುಮೆಂಟ್ಸ್ ಇಟ್ಟಿದ್ದಾರೆ.

ಶ್ರೀ ಕೊಂಡೂರು ಲಿಂಗಪ್ಪ.—ತಾವು ಪ್ರಸಿದ್ಧ ವಕೀಲರು. ಸತ್ಯವನ್ನು ಮರೆಮಾಡುವ ವಿಷಯ ಬೇಡ

ಶ್ರೀ ಎಚ್. ಸಿದ್ದವೀರಪ್ಪ.—ನಾವು ಏನು ಹೇಳಿದರೂ ನಿಮಗೆ ಹಾಗೆ ಕಾಣುತ್ತೆ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿದ ಹಾಗೆ.

ಶ್ರೀ ಎಚ್. ಡಿ. ದೇವೇಗೌಡ — ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿದ್ದು ಈಗ ಗೊತ್ತಾಗುವಷ್ಟಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಈಗ ಎರಡು ಅಭಿಪ್ರಾಯಗಳನ್ನು ಅರ್ಥ ಮಾಡುತ್ತಿದೇವೆ. ಇದ ಸರಿಯೋ, ಅದು ಸರಿಯೋ ಎನ್ನುವ ಸ್ಪಷ್ಟವಾದಂಥ ಅಭಿಪ್ರಾಯದ ಬಗ್ಗೆ ರೂಲಿಂಗ್ ಕೊಡುವ ಪ್ರಶ್ನೆ ಇಲ್ಲ. ಪಬ್ಲಿಕ್ ಇಂಟರೆಸ್ಟ್ ಎನ್ನುವ ಮಾತನ್ನು ತಡೆಹಿಡಿಯುವುದು ಏನೂ ಇಲ್ಲ ಯಾವುದಾದರೂ ಅರ್ಥ ಮಾಡುವುದರಲ್ಲಿ ಭಿನ್ನಾಭಿಪ್ರಾಯ ಬಂದರೆ ಆಗ ರೂಲಿಂಗ್ ಕೊಡಬೇಕಾದ ಪ್ರಶ್ನೆ ಉದ್ಭವವಾಗುತ್ತದೆ. ಈಗ ರೂಲಿಂಗ್ ಕೊಡಬೇಕಾದ ಅಗತ್ಯವಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ನಿನ್ನೆ ಶ್ರೀ ಕೆ. ಎಫ್. ಪಾಟೀಲರು ಮತ್ತು ಶ್ರೀ ದಯಾನಂದ ಸಾಗರ್‌ರವರು ಮಾತನಾಡಿದರು. ಡಾಕ್ಯುಮೆಂಟ್ ಇಡುವುದಕ್ಕೆ ೨೪ ಗಂಟೆ ಕಾಲ ಅವಕಾಶ ಬೇಕು ಎಂದು ಹೇಳಿದರು. ಪ್ರೊಸೀಡಿಂಗ್ಸ್‌ನ್ನು ದಯಮಾಡಿ ತರಿಸಿ ಓದಿಬಿಡಿ. ಬಾಯಿಯಲ್ಲಿ ಹೇಳುವುದು ಉಚಿತವೂ ಅನುಚಿತವೂ ಎನ್ನುವ ಆರ್ಗ್ಯುಮೆಂಟನ್ನು ತಾವು ಈ ಜಾಗದಲ್ಲಿ ಕುಳಿತು ಹೇಳಿ. ದಯವಿಟ್ಟು ವಿರಮೈ ಮಾಡಿ.

ಶ್ರೀ ಕೆ. ಎಫ್. ಪಾಟೀಲ್.—ಮಂತ್ರಿಗಳು, ಪುನಃ ನನ್ನ ಹತ್ತಿರ ಪೇಪರ್ಸ್ ಇಲ್ಲ ಎಂದು ಹೇಳಿದ ಮೇಲೆ ರೂಲಿಂಗ್ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಅಧ್ಯಕ್ಷರು.—ಮಂತ್ರಿಗಳು, ತಮ್ಮ ಹತ್ತಿರ ಇರುವ ಪೇಪರ್ಸ್‌ನ್ನು ಸಭೆಯಲ್ಲಿ ಮಂಡಿಸಿಬಿಟ್ಟಿದ್ದಾರೆ ಬೇರೆ ಏನೂ ಇಲ್ಲ ಎಂದು ಹೇಳುತ್ತಿದ್ದಾರೆ. ಕ್ಲಾರಿಫಿಕೇಷನ್ ಹೇಳಿದ್ದಾರಲ್ಲ.

Sri H. D. Deve Gowda.—It is only a telegram from the Government of India. There is nothing more than that.

Sri K. H. Patil.—It also includes the notification indicating the rate directing the maximum price etc.

ಶ್ರೀ ಕಾಗೋಡುತಿಮ್ಮಪ್ಪ.—ಹಳೇ ಗೊಬ್ಬರವನ್ನು ಹಳೇ ದರದಲ್ಲಿ ಮಾರಾಟ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಕೇಂದ್ರಸರ್ಕಾರದವರನ್ನು ಕೇಳಬೇಕಾಗಿತ್ತು ?

ಅಧ್ಯಕ್ಷರು.—ಮಂತ್ರಿಗಳ ಹತ್ತಿರ ಏನು ಪೇಪರ್ಸ್ ಇಲ್ಲ ಎಂದು ಹೇಳಿದ ಮೇಲೆ ತಾವು ಏನು ಮಾಡುವುದು ? ನಾವು ಏನು ಮಾಡುವುದು ?

ಶ್ರೀ ಎಚ್. ಡಿ. ದೇವೇಗೌಡ. ಮಂತ್ರಿಗಳು ನಿನ್ನೆ ತೆಗೆದುಕೊಂಡಂಥ ನಿಲುವಿಗೂ, ಇವತ್ತು ತೆಗೆದುಕೊಂಡಂಥ ನಿಲುವಿಗೂ ಏನೂ ವ್ಯತ್ಯಾಸ ಇಲ್ಲ ಎಂದು ತಾವು ಹೇಳಿ. ಆದುದರಿಂದ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುವ ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರು ಸಣ್ಣ ಮಕ್ಕಳ ಹಾಗೆ ಹಟ ಮಾಡಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ಮಂತ್ರಿಗಳು ತೆಗೆದುಕೊಂಡ ನಿಲುವಿನಿಂದ ಏನೂ ಡೀವಿಯೇಟ ಆಗಿಲ್ಲ ಎಂದು ತಾವು ಹೇಳಿ.

ಅಧ್ಯಕ್ಷರು.—ನಮ್ಮ ಹತ್ತಿರ ಏನೂ ಪೇಪರ್ಸ್ ಇಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಅವರು ಹೇಳಿದ್ದನ್ನೂ ಕೇಳಿದ್ದೀರಿ, ನಾವು ಹೇಳಿದ್ದನ್ನೂ ಕೇಳಿದ್ದೀರಿ. ಆದುದರಿಂದ ತಾವು ದಯವಿಟ್ಟು ರೂಲಿಂಗ್ ಕೊಡಬೇಕು.

Sri S. M. Krishna.—Madam Speaker, under Rule 304 which reads like this :

> "If a Minister quotes in the Assembly a despatch or other State paper which has not been presented to the Assembly, he shall lay the relevant paper on the Table :
>
> Provided that this rule shall not apply to any documents which are stated by the Minister to be of such a nature that their production would be inconsistent with public interest:
>
> Provided further that where a Minister gives in his own words a summary or gist of such despatch or State paper it shall not be necessary to lay the relevant papers on the Table."

We have placed every scap of paper on the Table of the Hause. I cannot understand how you have a reasonable grievances to demand for it. Mr. Thimmappa says that there is contradiction between the statement made today and yesterday by the Minister Mr. Chikke Gowda., The Hon. Speaker said that there is no such contradictions. I would like to know what more ruling you expect from the Chair and under what rule ?

SRI H. D. DEVE GOWDA.—If that is the ruling of the Chair I agree with it and don't argue further, Let the Speaker say that there is no such contradication between today's and yesterday's statement of the Minister.

SRI KAGODU THIMMAPPA.—Why have you sought clarification from the Central Government ?

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಅಭಿಪ್ರಾಯದಲ್ಲಿ ಕಡಿಮೆ ಬೆಲೆಗೆ ಮಾರುತ್ತಿದಾ ರೆ, ಅಥವಾ ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ ಎನ್ನುವುದು ಬೇರೆ ವಿಚಾರ. ನಾವು ಈ ಬೆಲೆಗೆ ಮಾರುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ,—ಇದನ್ನು ನೀವು ತಯಾರು ಮಾಡಿದ್ದಲ್ಲ. ಕಂಪನಿಯವರು ತಯಾರು ಮಾಡಿದ್ದು. We have to safeguard the interest of the public and farmers.

ಶ್ರೀ ಎಸ್.ಎಂ. ಕೃಷ್ಣ.—ಇದಕ್ಕೂ ಅದಕ್ಕೂ ಏನು ಸಂಬಂಧ ಇದೆ ? This is a procedural matter.

SRI KAGODU THIMMAPPA.—We can clearly read your mind. You have acted just to get a clarification from the Central Government.

ಶ್ರೀ ಎಸ್. ಎಂ. ಕೃಷ್ಣ.—ಪ್ರೊಸೀಜರಲ್ ಮ್ಯಾಟರ್ ಏನಾದರೂ ಇದ್ದರೆ ಬಿಸಿನೆಸ್ ಅಡ್ವೈಸರಿ ಕಮಿಟಿಗೆ ತಾವು ಒಂದು ಮೋಷನ್ ಕಳುಹಿಸಿ : ಚರ್ಚೆ ಮಾಡೋಣ: ಅದಕ್ಕೆ ಏನು ತೊಂದರೆ ಇದೆ ?

ಶ್ರೀ ಎಸ್. ಬಂಗಾರಪ್ಪ.—On the merits of the matter ಮಾತನಾಡುವುದಕ್ಕೆ ಹೋದರೆ, ಕೇಂದ್ರ ಸರ್ಕಾರದವರಿಗೂ ರಾಜ್ಯ ಸರ್ಕಾರದವರಿಗೂ ಪತ್ರ ವ್ಯವಹಾರ ಆಗಿದ್ದರೆ ಹಳೆ ಗೊಬ್ಬ ರವನ್ನು ಪೂಸ ದರದಲ್ಲಿ ಏತಕ್ಕೆ ಮಾರಿದ್ದಾರೆಂದೇ ಆ ವಿಷಯವನ್ನು ಇಲ್ಲಿ ಚರ್ಚೆಗೆ ತೆಗೆದುಕೊಂಡಿದ್ದು, ಈ ಸಂದರ್ಭದಲ್ಲೇ ಆ ವಿಷಯ ಇಲ್ಲಿ ಚರ್ಚೆಗೆ ಬಂದಿದೆ ಅಷ್ಟೆ.

ಅಧ್ಯಕ್ಷರು.—ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರೂ ಕುಳಿತುಕೊಳ್ಳಿಬೇಕು. ನಿನ್ನೆ ದಿವಸ ಕ್ಲಾರಿ ಫಿಕೇಷನ್ ತೆಗೆದುಕೊಂಡು ಬಂದಮೇಲೆ, ಆ ರೇಟಿನಲ್ಲಿ ಮಾರುವುದಕ್ಕೆ ಆರ್ಡರ್ಸ್ ಇಶ್ಯೂಮಾಡಿದ್ದಾರೆಂದು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ ಕ್ಲಾರಿಫಿಕೇಷನ್ ಬಗ್ಗೆ ನಿನ್ನೆ ದಿವಸ ಚರ್ಚೆಯಾದಾಗಲೂ ನಾನೇ ಇದ್ದು ಕೇಳಿದ್ದೇನೆ, ಇವತ್ತಿನ ದಿವಸವೂ ನಾನೇ ಇದ್ದು ಕೇಳಿದ್ದೇನೆ. ಅವರು ಹೇಳಿದ ಪ್ರಕಾರ ಕ್ಲಾರಿಫಿಕೇಷನ್ ತೆಗೆದುಕೊಂಡಿದ್ದೇವೆಂದೂ ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಕ್ಲಾರಿಫಿಕೇಷನ್ ಹೇಗೆ ತೆಗೆದುಕೊಂಡದ್ದು ಎನ್ನುವುದನ್ನೂ ಅವರು ಡಿಫೈನ್ ಮಾಡುತ್ತಿದ್ದಾರೆ. ನಮ್ಮ ಆಫೀಸ್‌ನ ಮುಖಾಂತ ರವೇ ಫೋನ್ ಮಾಡಿ, ಟೆಲಿಗ್ರಾಂ ಮಾಡಿ ಇದ್ದ ಪೇಪರ್ಸ್‌ನ್ನೆಲ್ಲಾ ಈ ಸಭೆಯ ಮುಂದೆ ಮಾನ್ಯ ಸಚಿವರು ಲಿಖಿತ ವಾಗಿ ಇಡಬೇಕೆಂದು ಹೇಳದೆ ಇರುವುದರಿಂದ ಅವರಲ್ಲಿದ್ದ ಪೇಪರ್ಸ್‌ನ್ನೆಲ್ಲಾ ಸಭೆಯ ಮುಂದಿಟ್ಟಿದ್ದಾರೆ. ಒಂದು ಹೆಚ್ಚೆ ಮುಂದೆ ಹೋಗಿ, ಒಂದು ವೇಳೆ ಪೇಪರ್ಸ್ ಇದ್ದರೂ ರೂಲ್ಸ್ ಪ್ರಕಾರ ವಿತ್‌ಹೆಲ್ಡ್ ಮಾಡುವುದಕ್ಕೆ ಅವಕಾಶವಿದೆ, ಸಭೆಯ ಮುಂದೆ ಇಡುವಂತೆ ಮಾಡಲು ಯಾರ ಕೈಯಿಂದಲೂ ಸಾಧ್ಯವಾಗುವುದಿಲ್ಲವೆಂಬುದು ಗೊತ್ತಿದ್ದರೂ ಸಾಧ್ಯವಾದಷ್ಟು ಪೇಪರ್‌ನ್ನು ಮಾನ್ಯ ಮಂತ್ರಿಮಂತ್ರಿಗಳು ಸಭೆಯ ಮುಂದಿಟ್ಟಿರುವುದರಿಂದ ದಯವಿಟ್ಟು ಇದನ್ನೂ ಇಲ್ಲಿಗೆ ಕೈಬಿಟ್ಟು ಮುಂದುವರಿಸದೇ ಇರುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ ಈ ವಿಷಯದಲ್ಲಿ ತೀವ್ರವಾದ ಪ್ರತಿಭಟನೆ ಇದೆ. ನಮ್ಮದು ವಿತಂಡವಾದವೆಂದು ಹೇಳಿದರು, I am so sorry for it. ಇವತ್ತು ಈ ವಿಷಯವನ್ನು ಮರೆ ಮಾಚುವುದಕ್ಕೆ ಹೊರಟಿದ್ದಾರೆ, ಇಡೀ ದೇಶದ ಜನತೆಗೆ ಮರೆ ಮಾಚತಕ್ಕಂಥ ಕೆಲಸಕ್ಕೆ ಹೊರಟ್ಟಿದ್ದಾರೆ. ಇದರ ಬಗ್ಗೆ ತೀವ್ರವಾದ ಪ್ರತಿಭಟನೆ ಮಾಡಿ ನಾವು ಸಭಾತ್ಯಾಗವನ್ನು ಮಾಡಬೇಕಾಗುತ್ತದೆ. ನಾವು ಇನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರ ಈ ಹೇಳಿಕೆಯಿಂದ ಜನತೆಯ ಮನಸ್ಸನ್ನು ಬದಲಾಯಿಸ ಬಹುದು, ಜನತೆಯ ಮೇಲೆ ಪರಿಣಾಮ ಉಂಟು ಮಾಡಬಹುದೆಂದು ಅವರು ಈ ಅಭಿಪ್ರಾಯವನ್ನಿಟ್ಟು ಕೊಂಡು ವಾಕ್‌ಔಟ್ ಮಾಡುತ್ತೇವೆಂದು ಈ ಹೇಳಿಕೆಯನ್ನು ಕೊಡುವುದಾದರೆ ನಾವು ಅವರ ಹೇಳಿಕೆಯ ವಿರುದ್ಧ ಪ್ರತಿಭಟನೆ ಮಾಡಬೇಕಾಗುತ್ತದೆ.

MADAM SPEAKER.—The House will now adjourn for Tea and meet after half hour.

The House now for Tea at fifteen Minutes past Eleven to meet again at 11-45 a.m. of the Clock and reassembled at forty five Minutes past Eleven of the Clock.

[MR. DEPUTY SPEAKER in the Chair]

PRIVATE MEMBMR'S RESOLUTIONS

Re ; Recommending the Government of India to conduct castewie Census of the people in the State

(Debate Continued)

MR. DEPUTY SPEAKER.—We will take up non official resolution.

SRI D. DEVE GOWDA.—Before taking up non-official Resolution, I want to say that yesterday we were given to understand that the privilege motion given against Sri Koujalgi will be taken up today.

S. M. SHERNALY CHANDRASEKAR.—I rise on a point of order. Under rule 180. if the Speaker gives consent, a privilege motion can be taken up immediately after question hour. Now Question Hour was over and we have taken up other business.

SRI H. D. DEVE GOWDA.—What I wanted to submit is, we have already spent 1 1/2 hours on the other issue out of 3 1/2 hours allotted for non-official business. If you permit, this privilege motion can be taken up on Monday.

MR. DEPUTY SPEAKER.—Yes, let us utilise the remaining time for the non-official resolution.

SRI S. M. SHERNALY CHANDRASEKHARA—This particular non-official resolution we have been discussing for the last six months, with the